ಕಾದುಕೊಂಡಿರುವ ಬಗ್ಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಮಾಡೋಣ. ಮುಂದಿನ ಪ್ರಶ್ನೆ

ಮಂಡ್ಯ ಚೀರನಹಳ್ಳಿ ತಗ್ಗಹಳ್ಳಿ ಸಬ್ಬನಹಳ್ಳಿ ರಸ್ತೆಗಳನ್ನು ದುರಸ್ತಿಗೊಳಿಸುವುದು

26(123) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) ಮಂಡ್ಯ-ಚೀರನಹಳ್ಳಿ-ತಗ್ಗಹಳ್ಳಿ-ಸಬ್ಬವಹಳ್ಳಿ ರಸ್ತೆಯು ಮಂಡ್ಯ ಜಿಲ್ಲಾ ಪಂಚಾಯ್ತಿಯ ವ್ಯಾಪ್ತಿಗೆ ಒಳಪಡುತ್ತದೆಯೇ;

2) ಈ ರಸ್ತೆಯು ತೀರ ಹದಗೆಟ್ಟಿದ್ದು ಸಂಚಾರಕ್ಕೆ ಯೋಗ್ಯವಾಗಿಲ್ಲದೆ ಇರುವುದನ್ನು ಸರಕಾರವು ಮನಗಂಡಿದೆಯೇ;

3) ಹಾಗಿದ್ದಲ್ಲಿ, ಈ ರಸ್ತೆಯನ್ನು ದುರಸ್ತಿ ಪಡಿಸಿ ತುರ್ತು ಅಭಿವೃದ್ಧಿ ಮಾಡಲು ಸರಕಾರವು ಕ್ರಮವನ್ನೇನಾದರೂ ಕೈಗೊಂಡಿದೆಯೇ;

4) ಕೈಗೊಂಡಿದ್ದಲ್ಲಿ, ಅದರ ವಿವರಗಳೇನು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

1) ಹೌದು

2) ಕೆಲವು ಆಯ್ಕೆ ಭಾಗಗಳಲ್ಲಿ ರಸ್ತೆ ಹದಗೆಟ್ಟಿರುವುದು ಸರ್ಕಾರವು ಮನಗಂಡಿದೆ.

3) ಹೌದು

4) ಹೌದು ಈ ರಸ್ತೆಯು ಬರುವ ಒಂದು ಸೇತುವೆಯನ್ನು ರೂ.10.00 ಲಕ್ಷಗಳಲ್ಲಿ ಸರ್ಕಾರದ ಅನುದಾನದಲ್ಲಿ ಹಾಲಿ ವರ್ಷ ಕೈಗೊಳ್ಳಲಾಗುವುದು ಮತ್ತೊಂದು ಸೇತುವೆ ರೂ.7.00 ಲಕ್ಷಗಳಲ್ಲಿ ಈಗಾಗಲೇ ಕೈಗೊಂಡಿದ್ದು, ಪ್ರಗತಿಯಲ್ಲಿದೆ. ಮತ್ತು ರಸ್ತೆ ಅಭಿವೃದ್ಧಿಗಾಗಿ 1.75 ಕಿಮೀ ಉದ್ದದ ರಸ್ತೆಯನ್ನು ರೂ. 27.50 ಲಕ್ಷಗಳು ನಬಾರ್ಡ್ ಯೋಜನೆಯಡಿಯಲ್ಲಿ ಮತ್ತು ರೂ. 35.00 ಲಕ್ಷಗಳ ಅಂದಾಜು ವೆಚ್ಚದಲ್ಲಿ 2.45 ಕಿಮೀ ಉದ್ದದ ರಸ್ತೆಯನ್ನು ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಲ್ಲಿ ಅನುಮೋದನೆಗೊಂಡಿದ್ದು ಕಾರ್ಯರೂಪಗೊಳಿಸಲಾಗುವುದು.

ಶ್ರೀ ಎಂ.ಎಸ್. ಆತ್ಮಾನಂದ : ಮಾನ್ಯ ಅಧ್ಯಕ್ಷರೆ, ಮಂಡ್ಯ ಮತ್ತು ಮಳವಳ್ಳಿ ಸಂಪರ್ಕಿಸುವಂತಹ ರಸ್ತೆ ಕೃಷಿ ಉತ್ಪನ್ನಗಳನ್ನು ಸಾಗಿಸುವಂತಹ ಪ್ರಮುಖವಾದ ರಸ್ತೆಯಾಗಿದ್ದು, ಇದು ಹದಗಟ್ಟಿರುವಂಥಾದ್ದು ಸರ್ಕಾರವು ಮನಗಂಡಿದೆ ಎಂದು ಉತ್ತರದಲ್ಲಿ ತಿಳಿಸಿದ್ದಾರೆ. ಹಾಗೆ ಜಿಲ್ಲಾ ಪಂಚಾಯತ್, ಗ್ರಾಮ ಸಡಕ್ ಯೋಜನೆ, ಮತ್ತು ನಬಾರ್ಡ್ ಯೋಜನೆಯಡಿಯಲ್ಲಿ 72ಲಕ್ಷ ರೂಪಾಯಿಗಳ ದುರಸ್ತಿ ಕಾಮಗಾರಿಯನ್ನು ತೆಗೆದುಕೊಳ್ಳಲಾಗುತ್ತದೆಂದು ಉತ್ತರದಲ್ಲಿ ತಿಳಿಸಿದ್ದಾರೆ. ಈ ದುರಸ್ತಿ ಕಾರ್ಯ ಕೇವಲ ಕಾಗದದಲ್ಲಿ ಮಾತ್ರ ಉಳಿದಿದೆಯೇ, ಹೊರತು

ಕಾರ್ಯಗತವಾಗುತ್ತಿಲ್ಲ. ಕಳೆದ ನಾಲ್ಕಾರು ತಿಂಗಳುಗಳಿಂದ ಪದೇ ಪದೇ ಒತ್ತಾಯ ಮಾಡಿದರೂ ಏನೂ ಕಾರ್ಯಗತವಾಗುತ್ತಿಲ್ಲ. ನಾವು ಪ್ರತಿನಿತ್ಯ ಜನರ ಪ್ರತಿರೋಧವನ್ನು ಎದುರಿಸಬೇಕಾಗಿದೆ, ಮತ್ತು ನಾಲ್ಕಾರು ಕಿಲೋಮೀಟರ್ ಸಾರ್ವಜನಿಕರಾಗಲಿ, ವಾಹನಗಳಾಗಲಿ, ಬಳಸಿಕೊಂಡು ಹೋಗುವಂತಹ ಪರಿಸ್ಥಿತಿ ಇದೆ, ಇದಲ್ಲಿದೆ ಬಸ್ ಸಂಚಾರಕ್ಕೂ ಈ ಮಾರ್ಗದಲ್ಲಿ ತೊಂದರೆ ಇರುವಂತಹ ಕಾಲದಲ್ಲಿ ನಿಗದಿತ ವೇಳೆಯಲ್ಲಿ ಈ ದುರಸ್ತಿ ಕಾರ್ಯವನ್ನು ಮಾಡಬೇಕಾಗಿದೆ.

12.00 ಪಿ.ಎಂ.

ಆದಕಾರಣ ಯಾವಾಗ ಈ ಕಾಮಗಾರಿಯನ್ನು ಪ್ರಾರಂಭ ಮಾಡುತ್ತಾರೆಂಬುದನ್ನು ಮಾನ್ಯ ಮಂತ್ರಿಗಳಲ್ಲಿ ಕೇಳಬಯಸುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ : ಸನ್ಮಾನ್ಯ ಅಧ್ಯಕ್ಷರೆ, ಈ ರಸ್ತೆ 12 ಕಿಲೋಮೀಟರ್ ಉದ್ದವಿದ್ದು ಮಂಡ್ಯ ಜಿಲ್ಲೆಯ ವ್ಯಾಪ್ತಿಯಲ್ಲಿ ಇರುವ ವಿಶ್ವೇಶ್ವರಯ್ಯ ಕೆನಾಲ್ ಭಾಗದಲ್ಲಿದೆ, ಅಲ್ಲಿ ದಟ್ಟುವಾಗಿ ಕಬ್ಬು ಅನ್ನು ಬೆಳೆಯುತ್ತಿದ್ದಾರೆ, ಒಂದು ಮೂರು-ನಾಲ್ಕು ಕಿಲೋಮೀಟರ್ ರಸ್ತೆ ಅಪ್‌ಗ್ರೇಡ್ ಮಾಡುವ ಅವಶ್ಯಕತೆ ಇದೆ. ಇದನ್ನು ಗಮನಿಸಿ ಸರ್ಕಾರ 2.45 ಕಿಲೋಮೀಟರ್ ರಸ್ತೆಯನ್ನು ಪ್ರೈಮ್ ಮಿನಿಸ್ಟರ್ ಸಡಕ್ ಯೋಜನೆಯಡಿಯಲ್ಲಿ ತೆಗೆದುಕೊಂಡಿದ್ದೇವೆ, ಇನ್ನು 1.75 ಕಿಲೋಮೀಟರ್ ನಬಾರ್ಡ್ ಯೋಜನೆಯಡಿ ತೆಗೆದುಕೊಂಡಿದ್ದೇವೆ ಮತ್ತೆ ಅಲ್ಲಿ ಬೇಕಾಗಿರುವ ಎರಡು ಸೇತುವೆಗಳ 7 ಲಕ್ಷ ರೂಪಾಯಿಗಳ ಕೆಲಸ ನಡೆಯುತ್ತಿದೆ, ಇನ್ನು 10 ಲಕ್ಷ ರೂಪಾಯಿಗಳ ವೆಚ್ಚದ ಸೇತುವೆ ಕೆಲಸವನ್ನು ಇಷ್ಟರಲ್ಲೇ ಪ್ರಾರಂಭ ಮಾಡುತ್ತೇವೆ.

ಶ್ರೀ ಎಂ.ಎಸ್. ಆತ್ಮಾನಂದ : ಸೇತುವೆ ಕಾಮಗಾರಿಗೆ ಪೂಜೆಯಾಗಿದ್ದರೂ ಕಾಮಗಾರಿ ಆರಂಭವಾಗಿಲ್ಲ, ಗ್ರಾಮ ಸಡಕ್ ಯೋಜನೆಯಡಿಯಲ್ಲಾಗಲಿ ನಬಾರ್ಡ್ ಯೋಜನೆಯಡಿಯಲ್ಲಾಗಲಿ ಅಂದಾಜು ತಯಾರಾಗಿರುವ ಸ್ಥಿತಿಯಲ್ಲೂ ಇಲ್ಲ, ಈ ಕಾಮಗಾರಿ ಮಂಜೂರಾಗಿ ನಾಲ್ಕೈದು ತಿಂಗಳು ಕಳೆದಿದ್ದರೂ ಕೂಡ ಇನ್ನೂ ಅಂದಾಜು ತಯಾರು ಮಾಡಿಲ್ಲ ಆ ಕಛೇರಿ ಈ ಕಛೇರಿ ಎಂದು ಓಡಾಡುತ್ತಿರುವ ಹಿನ್ನೆಲೆಯಲ್ಲಿ ಖಚಿತವಾಗಿ ಈ ಕಾಮಗಾರಿಯನ್ನು ಎಂದು ಆರಂಭಿಸಲಾಗುವುದೆಂಬುದನ್ನು ನಾನು ಕೇಳಬಯಸುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ : 2.45 ಕಿ.ಮೀ ರಸ್ತೆಗೆ 35 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ, ಇದು ಚೀಫ್ ಇಂಜಿನಿಯರ್‌ನಿಂದ ಸ್ಕ್ರುಟಿನೈಸ್ ಆಗಿ ಜಿಲ್ಲಾ ಡಿವಿಷನ್‌ಗೆ ವಾಪಸ್ ಕಳುಹಿಸಲಾಗಿದೆ. ಮತ್ತೆ ಆದ್ಯತೆಯ ಮೇರೆಗೆ ಟೆಂಡರ್ ಕರೆದು ಈ ಕೆಲಸ ಆರಂಭ ಮಾಡಬೇಕಾಗುತ್ತದೆ, ಚೀಫ್ ಇಂಜಿನಿಯರ್ ವಾಪಸ್ ಕಳುಹಿಸಿದ್ದಾರೆ. 1.75 ಕಿ.ಮೀ ರಸೆಗೆ 27 ಲಕ್ಷ ರೂಪಾಯಿಗಳ ಅಂದಾಜು ಮಾಡಲಾಗಿದೆ, ಇದು ಸಚಿವ ಸಂಪುಟದ ಉಪ ಸಮಿತಿಯಲ್ಲಿ ಮಂಜೂರಾಗಿದೆ. ನಬಾರ್ಡ್ ನೆರವಿನ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಕಾರ್ಯಕ್ರಮದಲ್ಲಿ ಸೇರಿಸಲಾಗಿದೆ, ನಬಾರ್ಡ್‌ನಿಂದ ಕೆಲವು ಟೆಕ್ನಿಕಲ್ ಅಬ್‌ಸರ್ವೇಷನ್ ಬಂದಿತ್ತು, ಅದನ್ನು ಗಮನಿಸಿ ಈ ಅಂದಾಜಿನ ಜೊತೆಗೆ ಸಬ್‌ಮಿಟ್ ಮಾಡಬೇಕಾಗಿದೆ, ಅದನ್ನು ಒಂದೆರಡು ದಿನಗಳಲ್ಲಿ ರಿಸಬ್‌ಮಿಟ್ ಮಾಡಲಾಗುವುದು.